# ಎರುಗಲ್ಲು ಕಟ್ಟದ ಜಲಪಾತ

**‘ಕಟ್ಟ ನಮ್ಮದು, ಇದರಿಂದ ನಮ್ಮೂರು ಮಾತ್ರವಲ್ಲ, ಸುತ್ತಮುತ್ತಲ ಊರುಗಳ ಜಲಮಟ್ಟವೂ ಏರುತ್ತದೆ’ ಎಂದು ಎರುಗಲ್ಲು ಎಂಬ ಪುಟ್ಟ ಊರಿನ ನೂರಾರು ಕೃಷಿಕರು ಮನಗಂಡಿದ್ದಾರೆ.**

ಚಿತ್ರ– ಲೇಖನ:
**ಶಂಕರ್ ಸಾರಡ್ಕ**



ದಶಕಗಳ ಹಿಂದಿನ ಪ್ರಯತ್ನ. ಕೇರಳದ ಕಾಸರಗೋಡು ಜಿಲ್ಲೆಗೆ ಸೇರಿದ ಅಡ್ಯನಡ್ಕ ಸನಿಹದ ಎರುಗಲ್ಲು ಸುತ್ತು ಮುತ್ತ ಸೀರೆ ಹೊಳೆ ದಡದ ಕೃಷಿಕರಿಗೆ ಏಪ್ರಿಲ್ ತಿಂಗಳ ಸುಡು ಬಿಸಿಲಿಲಲ್ಲೂ ನೀರಿಗೆ ಬರವಿರಲಿಲ್ಲ. ಸಮೃದ್ಧ ಜಲ. ಎರುಗಲ್ಲು ಹೊಳೆಗೆ ಕಟ್ಟಿದ ಕಿರು ಅಣೆಕಟ್ಟು ಫಲ ಕೊಟ್ಟಿತ್ತು. ನೇರ ಫಲಾನುಭವಿಗಳು 15 ಮಂದಿಯಾದರೆ, ಮಣ್ಣಿನಡಿಯಲ್ಲಿ ನೀರಿನ ಒರತೆ ಹೆಚ್ಚಿ ಪರೋಕ್ಷ ಫಲ ಪಡೆದವರು ನೂರಾರು.

ಈ ಕಿರು ಅಣೆಕಟ್ಟು ಕಟ್ಟುವ ಯತ್ನಕ್ಕೆ ಆರಂಭದಲ್ಲಿ ಜನರು ಮುಂದೆ ಬರಲಿಲ್ಲ. ಎಲ್ಲರೂ ಕೊಳವೆ ಬಾವಿ ಕೊರೆಸಿ ಅಂತರ್ಜಲ ಮೇಲೆತ್ತುವುದರಲ್ಲಿ ಸ್ಪರ್ಧೆಗಿಳಿದವರೇ. ಕಳೆದ ಹತ್ತು ವರ್ಷಗಳಲ್ಲಿ ಇಲ್ಲಿ ಕೊರೆದ ಕೊಳವೆ ಬಾವಿಗಳು ಅನೇಕ. ಆದರೆ ನೀರು ಪಡೆದವರು ಬೆರಳೆಣಿಕೆಯಷ್ಟೇ. ಹಾಗೆ ಕೆಲವರು ಪಡೆದ ನೀರು ಕೂಡಾ ಅಷ್ಟಕ್ಕಷ್ಟೇ. ಈ ವಾಸ್ತವದ ಅರಿವಿದ್ದ ಊರಿನ ಜನರಿಗೆ ದಶಕಗಳ ಹಿಂದಿನ ಕಿರು ಅಣೆಕಟ್ಟು ಮತ್ತೆ ನೆಪಾಯಿತು.

ಕಳೆದ ಡಿಸೆಂಬರ್ 15ರಂದು ಕಿರು ಅಣೆಕಟ್ಟು ಕಟ್ಟುವ ಸ್ಥಳವಾದ ಎರುಗಲ್ಲಿನ ಹೊಳೆಯಲ್ಲಿಯೇ ಪರಿಸರದ ಕೃಷಿಕರು ಸಭೆ ಸೇರಿದರು. ಇಳಿಮುಖವಾದ ಮಳೆ, ಮುಂದೆ ಎದುರಿಸಬಹುದಾದ ಜಲಕ್ಷಾಮವನ್ನು ಗಮನದಲ್ಲಿರಿಸಿಕೊಂಡು ಎರುಗಲ್ಲಿನ ಆಯಕಟ್ಟಿನ ಸ್ಥಳದಲ್ಲಿ ಕಟ್ಟದ ಆವಶ್ಯಕತೆಯ ಬಗ್ಗೆ ಗಂಭೀರ ಚರ್ಚೆಗಳು ನಡೆದವು.

ಅದರ ಫಲವಾಗಿ ಎರುಗಲ್ಲಿನ ಸ್ಥಳದಲ್ಲಿ ಅಣೆಕಟ್ಟು ರೂಪುಗೊಂಡಿತು. ವೆಚ್ಚ ಕಡಿಮೆ ಮಾಡುವುದಕ್ಕಾಗಿ ಗೋಣಿ ಚೀಲಗಳಲ್ಲಿ ಮರಳು ತುಂಬಿಸಿ ಎರಡೂ ಬದಿಗಿರಿಸಿ, ನಡುವೆ ಮಣ್ಣು ತುಂಬಿಸಲಾಯಿತು. ಕಟ್ಟ ಕಟ್ಟಿದ ಸ್ಥಳದ ಅಡಿಭಾಗ ಪೂರ್ತಿ ಕಲ್ಲಿನದಾಗಿದ್ದು, ನೀರಿನ ಸೋರಿಕೆ ಇಲ್ಲ. ಒಂದು ಕಿಲೋಮೀಟರ್ ದೂರದ ತನಕ ಹೊಳೆಯಲ್ಲಿ ನೀರು ಶೇಖರಣೆಗೊಂಡು ಮಾದುವಿನ (ಅಣೆಕಟ್ಟಿನಲ್ಲಿ ನೀರು ತುಂಬಿದಾಗ ಹೊರಹರಿಯಲು ಮಾಡಿದ ಒಂದೆಡೆ ತಗ್ಗಾದ ವ್ಯವಸ್ಥೆ) ಮೂಲಕ ನೀರು ಹೊರ ಹರಿಯುತ್ತಿದೆ. ಈ ಕಟ್ಟದಲ್ಲಿ ಇನ್ನೂ 15 ದಿನಗಳಿಗಾಗುವಷ್ಟು ಮೇಲೆಯೇ ಕಾಣುವ ನೀರಿದೆ. ನಂತರ ಮರಳ ಒಳಗೆ ಮತ್ತು ಮಣ್ಣಿನಲ್ಲಿರುವ ಹೀರಲ್ಪಟ್ಟ ನೀರು ಇನ್ನೊಂದು